ಅಂತ ಮುತ್ಯಾಲ ಕಡಪಾದಿಂದ ಹೊರಡುವ ದಿನ ಹೇಳಿದ್ದ. ಆದರೆ ಇಬ್ಬರಿಗೂ ಹೋಲಿಕೆಯೇ ಇಲ್ಲ. ಅವಳಿಗೆ ತೆಲುಗು ಬಿಟ್ಟರೆ ಬೇರೆ ಗೊತ್ತಿಲ್ಲ. ಮುತ್ಯಾಲ ಕನ್ನಡವನ್ನೂ ಸಲೀಸಾಗಿ ಆಡುತ್ತಾನೆ. ಹಿಂದೆ ಯಾವಾಗಲೋ ಒಂದೆರಡು ವರ್ಷ ಇದೇ ಊರಲ್ಲಿ ಯಾವುದೊ ಕಾಟನ್ ಜಿನ್ನಿಂಗ್ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದನಂತೆ. ಆದರೆ ಕನ್ನಡ ಆಡುವಾಗ ತೆಲುಗು ಪದಗಳು ಅನಾಯಾಸ ಇಣುಕಿ ಅವನ ಮೂಲ ಗೊತ್ತಾಗಿ ಬಿಡುತ್ತಿತ್ತು.

ನಮ್ಮಲ್ಲಿ ಯಾರಾದರೂ ಇಬ್ಬರು ಮೊದಲು ಕೆಲಸ ಹುಡುಕಿಕೊಳ್ಳಬೇಕು. ಲಕ್ಷ್ಮಣ ಎಲ್ಲಾದರೂ ಕೆಲಸಕ್ಕೆ ಸೇರಲಿ. ಅಲ್ಲಿ ಕೆಲಸ ಮಾಡುತ್ತ ನಮ್ಮವರ ಪರಿಚಯ ಮಾಡಿಕೊಳ್ಳಲಿ. ಅನಂತಪುರ ರಸ್ತೆ ಅಕ್ಕ ಪಕ್ಕ ಅಥವಾ ಎರ್ರಿತಾತ ಕಾಲೊನಿಯಲ್ಲಿ ಒಂದು ಬಾಡಿಗೆ ಮನೆ ಹಿಡೀಬೇಕು. ನಮ್ಮವರು ಹೆಚ್ಚಾಗಿರೋದು ಅಲ್ಲೇ ಅಂತೆ. ಚಿಟ್ಟಿಯನ್ನು ಯಾವುದಾರೂ ಕಾಟನ್ ಮಿಲ್‌ಗೆ ಸೇರಿಸಬೇಕು. ಉಳಿದವರು ಓಡಾಡಿಕೊಂಡು ಕೊಂಡಯ್ಯನನ್ನು ಹುಡುಕಬೇಕು. ಅವನು ಸಿಕ್ಕರೆ ಮುಂದಿನದೆಲ್ಲ ಸಲೀಸಾಗಿ ಬಿಡುತ್ತದೆ ಅಂತ ವೆಂಕಟಗಿರಿ ಯೋಚಿಸುತ್ತಿದ್ದ.

ಲಕ್ಷ್ಮಿಯನ್ನು ಯಾರದ್ದಾದರೂ ಮನೆಯಲ್ಲಿ ಕಸ ಮುಸುರೆ ಕೆಲಸಕ್ಕೆ ಸೇರಿಸಬೇಕು ಅಂತ ಆ ಕ್ಷಣಕ್ಕೆ ಅನ್ನಿಸಿತು. ಅವಳು ಹುಟ್ಟಿ ಬೆಳೆದದ್ದೆಲ್ಲಾ ಭದ್ರಾಚಲಂನಲ್ಲಂತೆ. ಆದರೆ ಬಿಸಿಲು ತಾಳಿಕೊಳ್ಳುವ ಶಕ್ತಿ ಅವಳಿಗಿಲ್ಲ ಎನ್ನುವ ಅನುಕಂಪದ ಭಾವದಲ್ಲಿ ಅವಳತ್ತ ನೋಡಿದ. ಅವಳು ಮುಖ ಕೆಳಗೆ ಹಾಕಿ ತೂಕಡಿಸುತ್ತಿರುವಂತೆ ಕಾಣಿಸಿದಳು.

ಅವಳ ಮನಸ್ಸಿನಲ್ಲಿ ನನ್ನ ಬಗ್ಗೆ ಏನು ಅಭಿಪ್ರಾಯವಿದೆ ಅನ್ನೋದನ್ನು ಮೊದಲು ತಿಳಿದುಕೊಳ್ಳಬೇಕು ಅಂತ ಕಡಪಾದಿಂದ ಹೊರಡುವ ದಿನವೇ ವೆಂಕಟಗಿರಿಗೆ ಅನ್ನಿಸಿತ್ತು. ಇಲ್ಲಿಗೆ ಬಂದ ಮೇಲೆ ಅದು ಇನ್ನಷ್ಟು ಸ್ಪಷ್ಟವಾಯಿತು. ನಲವತ್ತರ ಆಸುಪಾಸಿನಲ್ಲಿರುವ ಅವಳಲ್ಲಿನ್ನೂ ಕಸುವಿದೆ. ಗೋಧಿ ಮೈಬಣ್ಣ, ದೊಡ್ಡ ಕಣ್ಣುಗಳು, ಲಕ್ಷಣವಾಗಿದ್ದಾಳೆ. ಒಪ್ಪಿದರೆ ಮುತ್ಯಾಲನ ಕಣ್ಣು ತಪ್ಪಿಸಿ ಎಲ್ಲಿಗಾದರೂ ಕರೆದುಕೊಂಡು ಹೋಗಿಬಿಡಬೇಕು ಅಂತ ವೆಂಕಟಗಿರಿ ಹಲವು ಸಲ ಯೋಚಿಸಿದ್ದ. ಆದರೆ ಅವಳ ಮನಸ್ಸಿನಲ್ಲೇನಿದೆ ಅನ್ನೋದು ಗೊತ್ತಾಗದೆ ಚಡಪಡಿಸುತ್ತಿದ್ದ. ಅಷ್ಟರಲ್ಲಿ ಟೀ ಬಂತು. ಕುಡಿದು ಎಲ್ಲರೂ ಚೌಲ್ಟ್ರಿ ಕಡೆಗೆ ಹೆಜ್ಜೆ ಹಾಕಿದರು...

ರಾಣಿ ಚೌಲ್ಟ್ರಿಯ ದಪ್ಪ ಗೋಡೆಗಳ ಮೂಲೆ ರೂಮಿನಲ್ಲಿ ಲಕ್ಷ್ಮಿ ಒಬ್ಬಳೇ ಮಲಗುತ್ತಿದ್ದಳು. ಕತ್ತಲಾಗುವ ಮೊದಲು ಚೌಲ್ಟ್ರಿ ಅಂಗಳದ ಒಂದು ಮೂಲೆಯಲ್ಲಿ ಒಲೆ ಹೂಡಿ ಅನ್ನ ಬಸಿಯುತ್ತಿದ್ದಳು. ಪೋತರಾಜು ಬಸ್‌ಸ್ಟ್ಯಾಂಡ್ ಹೋಟೆಲಿಂದ ಸಾಂಬಾರು ತರುತ್ತಿದ್ದ. ಒಂಬತ್ತರ ಹೊತ್ತಿಗೆ ಎಲ್ಲರ ಜತೆ ಕೂತು ಊಟ ಮಾಡಿದ ಮೇಲೆ ಅವಳು ರೂಮಿನ ಬಾಗಿಲು ಹಾಕಿಕೊಂಡರೆ ಹೊರಕ್ಕೆ ಬರುತ್ತಿದ್ದುದು ಪೂರ್ತಿ ಬೆಳಗಾದ ಮೇಲೇ. ಅವಳ ಜತೆ ಮಾತಾಡಲು ವೆಂಕಟಗಿರಿಗೆ ಅವಕಾಶ ಸಿಕ್ಕಿರಲಿಲ್ಲ. ಮುತ್ಯಾಲ ಯಾವಾಗಲೂ ಅವಳ ನೆರಳಿನಂತೆ ಇರುತ್ತಿದ್ದ.

ಗಂಡಸರೆಲ್ಲ ಚೌಲ್ಟ್ರಿಯ ಉದ್ದನೆಯ ಹಜಾರದಲ್ಲಿ ಮಲಗುತ್ತಿದ್ದರು. ಮಧ್ಯರಾತ್ರಿ ದಾಟಿದ ಮೇಲೆ ಬರುತ್ತಿದ್ದ ಬೀಟ್ ಪೋಲೀಸರು ಎಲ್ಲರನ್ನೂ ಎಬ್ಬಿಸಿ ವಿಚಾರಣೆ ಮಾಡುತ್ತಿದ್ದರು. ನೀವು ಬಂದು ಮೂರು ದಿನ ಆಯ್ತು. ಇನ್ನೂ ಯಾಕೆ ಇಲ್ಲೇ ಇದ್ದೀರಾ ಅನ್ನೋದು ಅವರ ಪ್ರಶ್ನೆ. ನಮ್ಮ ಹುಡುಗ ಇನ್ನೂ ಸಿಕ್ಕಿಲ್ಲ... ಅವನನ್ನು ಹುಡುಕಿ ಕರಕೊಂಡೇ ನಾವು ಊರಿಗೆ ಹೋಗೋದು ಅನ್ನೋದು ಇವರ ಉತ್ತರ. ಮುಂದಿನ ಪ್ರಶ್ನೆ ಕೇಳದೆ ಒಬ್ಬ ಪೊಲೀಸು ಐವತ್ತು ರೂಪಾಯಿ ಕೊಡು ಅನ್ನುತ್ತಾನೆ. ತಕ್ಷಣ, ವೆಂಕಟಗಿರಿ ಜೇಬಿಂದ ನೋಟು ತೆಗೆಯುತ್ತಾನೆ. ಇನ್ನೊಬ್ಬ ನೋಟನ್ನು ಕಸಿದುಕೊಳ್ಳುತ್ತಾನೆ. ಮರುಕ್ಷಣವೇ ಎಲ್ಲರೂ ಅಲ್ಲಿಂದ ಹೊರಟುಬಿಡುತ್ತಾರೆ. ಬಂದಾಗಿನಿಂದ ಬೀಟ್ ಪೊಲೀಸರು ಹೀಗೇ ಮಾಡುತ್ತಿದ್ದಾರೆ.